

# ಪರ್ವತದ ಭಿತ್ತಿಯಲಿ ಧೀಮಂತ ನಾಯಕರು

**ಮೌಂಟ್ ರಶ್‌ಮೋರ್ ಮೇಲೆ ಕೆತ್ತಲಾಗಿರುವ ಜಾರ್ಜ್ ವಾಷಿಂಗ್ಟನ್, ಥಾಮಸ್ ಜೆಫರ್ಸನ್, ಅಬ್ರಹಾಮ್ ಲಿಂಕನ್ ಹಾಗೂ ಥಿಯೋಡೊರ್ ರೂಸ್‌ವೆಲ್ಟ್ ಅವರ ಬೃಹತ್ ಗಾತ್ರದ ಶಿಲ್ಪಗಳು ಪ್ರಜಾಪ್ರಭುತ್ವದ ಯಶಸ್ವಿ ಆಡಳಿತದ ಮಾದರಿಗಳನ್ನು ನೆನಪಿಸುವ ಸ್ಮಾರಕಗಳಾಗಿವೆ.**

**■ ಕೋಟೂರ್ ಸಂಪತ್**

ಅಮೆರಿಕದ ಸೌತ್ ಡಕೋಟ ರಾಜ್ಯದ ಕೀಸ್ಟೋನ್ ಪಟ್ಟಣದಲ್ಲಿನ 'ರಶ್‌ಮೋರ್' ಪರ್ವತ ಅನೇಕ ಶತಮಾನಗಳ ಕಾಲ ಸ್ಥಳೀಯ ಅಮೆರಿಕನ್ ಬುಡಕಟ್ಟು ಜನಾಂಗಕ್ಕೆ ಪವಿತ್ರ ಸ್ಥಳವಾಗಿತ್ತು. 19ನೇ ಶತಮಾನದ ಉತ್ತರಾರ್ಧದಲ್ಲಿ ಅಮೆರಿಕ ತನ್ನ ವಿಸ್ತರಣೆಗೆ ಮೌಂಟ್ ರಶ್‌ಮೋರ್‌ನ 'ಬ್ಲಾಕ್ ಹಿಲ್ಸ್' ಪ್ರದೇಶಕ್ಕೆ ಲಗ್ಗೆ ಹಾಕಿತು. ಆಗ ಅಲ್ಲಿಯ ಒಡೆತನದ ಬುಡಕಟ್ಟು ಜನಾಂಗದವರೊಡನೆ ಯುದ್ಧಕ್ಕೆ ತೊಡಗಿ ಕೊನೆಗೆ 1868ರಲ್ಲಿ ಒಪ್ಪಂದವಾಗಿ ಹಿಂದೆ ಸರಿದಿತ್ತು.

ಆದರೆ 1877ರಲ್ಲಿ ಅಮೆರಿಕ ಈ ಒಪ್ಪಂದ ಮುರಿದು ಮೌಂಟ್ ರಶ್‌ಮೋರ್/ಬ್ಲಾಕ್ ಹಿಲ್ಸ್ ಪ್ರದೇಶವನ್ನು ಆಕ್ರಮಿಸಿಕೊಂಡಿತು. ಇದಾದ ನಂತರ ಬೇರೆಡೆಯ ನಾಗರಿಕರು ಅಲ್ಲಿ ನೆಲೆಸಲು ಮತ್ತು ಲಾಭ ಮಾಡಲು ವಲಸೆ ಬರತೊಡಗಿದರು. ಅಂತಹವರಲ್ಲಿ ಆಹ್ವಾನಿತ ನ್ಯೂಯಾರ್ಕ್ ವಕೀಲ ಚಾರ್ಲ್ಸ್ ರಶ್‌ಮೋರ್ ಸಹ ಒಬ್ಬರು. ಅಲ್ಲಿಗೆ ಬಂದ ದಿನ ಅವರು ಸ್ಥಳೀಯ ಮಾರ್ಗದರ್ಶಿಯನ್ನು ಪರ್ವತದ ಹೆಸರು ಕೇಳಿದರು. ಈ ಪರ್ವತಕ್ಕೆ ಹೆಸರಿಲ್ಲ ಎಂದು ಹೇಳಿದರು. ಆಗಲೇ 'ಮೌಂಟ್ ರಶ್‌ಮೋರ್' ಎಂದು ನಾಮಾಂಕಿತವಾಯಿತು.

1920ರಲ್ಲಿ ಮೌಂಟ್ ರಶ್‌ಮೋರ್ ಇರುವ ಸೌತ್ ಡಕೋಟ, ಅಮೆರಿಕದ ರಾಜ್ಯವಾಯಿತು. ಆಗ ಈ ಪರ್ವತ ಶ್ರೇಣಿ ವೀಕ್ಷಿಸಲು, ಚಾರಣ ಮಾಡಲು ಪ್ರವಾಸಿಗರು ಬರತೊಡಗಿದರು. ರಾಜ್ಯ ಇತಿಹಾಸ ಸಂಸ್ಥೆಯ ಕಾರ್ಯದರ್ಶಿ ಡಿ. ರಾಬಿನ್‌ಸನ್ ದೂರದ ಜಾರ್ಜಿಯಾದ ಬೆಟ್ಟದಲ್ಲಿ ಭಾರಿ ಶಿಲ್ಪ ಕೆತ್ತನೆ ನೋಡಿ ತಿಳಿದಿದ್ದರು. ಅದೇ ಮಾದರಿ ಮೌಂಟ್ ರಶ್‌ಮೋರ್‌ನಲ್ಲೂ ಪ್ರವಾಸಿ ಆಕರ್ಷಣೆಯ ಬೃಹತ್ ಶಿಲ್ಪಗಳನ್ನು ಕೆತ್ತಿಸುವ ಇಚ್ಛೆ ಹೊಂದಿದರು. 1924ರಲ್ಲಿ ನುರಿತ ಶಿಲ್ಪಿಗಳನ್ನು ಸಂಪರ್ಕಿಸಿ ಕೊನೆಗೆ ಜಾರ್ಜಿಯಾದ ಬೆಟ್ಟದಲ್ಲಿ ಶಿಲ್ಪ ಕೆತ್ತಿದ್ದ ಗಟ್ಝಾನ್ ಬೋರ್ಗ್ಲಮ್ ಅವರನ್ನು ಬರಮಾಡಿಕೊಂಡರು. ಆ ಭಾರಿ



ಶಿಲ್ಪಿ ಗಟ್ಝಾನ್ ಬೋರ್ಗ್ಲಮ್

ಮೌಂಟ್ ರಶ್‌ಮೋರ್ ಪರ್ವತದ ಘನವಾದ ಬೆಣಚುಕಲ್ಲು (ಗ್ರಾನೈಟ್) ಬಳಸಿ ಯಾವ ಶಿಲ್ಪ ಕೆತ್ತಬೇಕೆಂಬುದರ ಬಗ್ಗೆ ಪ್ರಾಯೋಜಕ ಸಂಸ್ಥೆಗೂ ಶಿಲ್ಪಿಗೂ ಅನೇಕ ಸುತ್ತಿನ ಮಾತುಕತೆಗಳಾಗಿ ಕೊನೆಗೆ ಬೋರ್ಗ್ಲಮ್ ಸಲಹೆಗೆ ಎಲ್ಲರ ಒಪ್ಪಿಗೆ ದೊರಕಿತು.

ಶಿಲ್ಪಿಯ ಸೂಚನಾ ಸಲಹೆಯಲ್ಲಿದ್ದದ್ದು ಅಮೆರಿಕದ ಜನಪ್ರಿಯ, ಪ್ರಗತಿಶೀಲ, ಪ್ರಭಾವಶಾಲಿ ಹಾಗೂ ಯಶಸ್ವಿ ಅಧ್ಯಕ್ಷರುಗಳಾದ ಜಾರ್ಜ್ ವಾಷಿಂಗ್ಟನ್, ಥಾಮಸ್ ಜೆಫರ್ಸನ್, ಅಬ್ರಹಾಮ್ ಲಿಂಕನ್ ಹಾಗೂ ಥಿಯೋಡೊರ್ ರೂಸ್‌ವೆಲ್ಟ್ ಅವರ ಮುಖ ಭಾಗದ ಬೃಹತ್ ಗಾತ್ರದ ಶಿಲ್ಪಗಳು. ಸ್ಥಳೀಯ ಸಂಸ್ಥೆಗಳ ಮತ್ತು ಅಮೆರಿಕ ರಾಷ್ಟ್ರ ಒಕ್ಕೂಟದ ನಿಧಿ ಮಂಜೂರಾತಿಯಿಂದ ಸ್ಮಾರಕ ಯೋಜನೆ ಮತ್ತು ಶಿಲ್ಪ ಕೆತ್ತನೆ ಕೆಲಸ ಶುರುವಾಯಿತು. ಪ್ರಾರಂಭದಲ್ಲಿ ಸ್ಥಳೀಯ ಬುಡಕಟ್ಟು ಜನಾಂಗ ತಮ್ಮ ಪವಿತ್ರ ಪರ್ವತ ಸ್ಥಳವನ್ನು ಅಪವಿತ್ರಗೊಳಿಸುತ್ತಿದ್ದಾರೆಂದು ಆಕ್ಷೇಪ ತೆಗೆದರು. ಆ ವಿರೋಧವನ್ನು ಸರ್ಕಾರ ಹತ್ತಿಕ್ಕಿತು.

ಮೌಂಟ್ ರಶ್‌ಮೋರ್‌ನಲ್ಲಿ ಅಮೆರಿಕದ ಮೊದಲ 150 ವರ್ಷಗಳ ಇತಿಹಾಸ ಪ್ರತಿನಿಧಿಸುವ ನಾಲ್ವರು ಧೀಮಂತ ಅಧ್ಯಕ್ಷರ ಮುಖ ಶಿಲ್ಪಗಳ ಕೆತ್ತನೆಯ ಕೆಲಸವನ್ನು ಶಿಲ್ಪಿ ಗಟ್ಝಾನ್ ಬೋರ್ಗ್ಲಮ್ 400 ಶಿಲ್ಪ ಕಾರ್ಮಿಕರೊಡನೆ ಅಕ್ಟೋಬರ್ 4, 1927ರಂದು ಪ್ರಾರಂಭಿಸಿದರು. ಶಿಲ್ಪಗಳ ಪೂರ್ಣ ರೂಪ ಮೂಡಲು ಡೈನಮೈಟ್ ಬಳಸಿ ಸುಮಾರು 4.5 ಲಕ್ಷ ಟನ್‌ಗಳಷ್ಟು ಅನಗತ್ಯ ಬೆಣಚುಕಲ್ಲುಗಳನ್ನು ಕೆತ್ತಿ ತೆಗೆಯಲಾಯಿತು. 1933ರಲ್ಲಿ ಈ ಪ್ರದೇಶವನ್ನು 'ನ್ಯಾಷನಲ್ ಪಾರ್ಕ್ ಸರ್ವೀಸ್' ತನ್ನ ವ್ಯಾಪ್ತಿಗೆ ತೆಗೆದುಕೊಂಡು ಮೂಲಸೌಕರ್ಯ ಸುಧಾರಿಸಿತು.

ಶಿಲ್ಪ ಕೆತ್ತನೆ ಕಾರ್ಯ ಅಂತ್ಯಕ್ಕೆ ಬರುತ್ತಿದ್ದಂತೆ ಹೊಸ ಮುಖಗಳ ಸೇರ್ಪಡೆ ಆಗಬೇಕೆಂಬ ವಾದವಿವಾದ ಹುಟ್ಟಿಕೊಂಡಿತು. ಆದರೆ ಇದಕ್ಕೆ ರಾಷ್ಟ್ರಾಡಳಿತದ ಸಮ್ಮತಿ ಸಿಗಲಿಲ್ಲ. ಅಕ್ಟೋಬರ್, 1941 ಪ್ರತಿಷ್ಠಿತ ನಾಲ್ವರು ಅಮೆರಿಕ ಅಧ್ಯಕ್ಷರ 60 ಅಡಿ ಎತ್ತರದ ಮುಖಗಳ 'ಮೌಂಟ್ ರಶ್‌ಮೋರ್ ಸ್ಮಾರಕ' ಲೋಕಾರ್ಪಣೆಗೊಂಡಿತು. ದುರದೃಷ್ಟವಶಾತ್, ಶಿಲ್ಪಿ ಗಟ್ಝಾನ್ ಬೋರ್ಗ್ಲಮ್ ಮಾರ್ಚ್ 1941ರಲ್ಲಿ ತೀರಿಹೋದರು. ಮುಂದಿನ ಕೆತ್ತನೆಯನ್ನು ಅವರ ಮಗ ಲಿಂಕನ್ ಬೋರ್ಗ್ಲಮ್ ಪೂರ್ಣಗೊಳಿಸಿದರು. ಈ ಯೋಜನೆಗೆ ಆಗ ಒಟ್ಟಾರೆ 989992.32 ಯುಎಸ್ ಡಾಲರ್ ವೆಚ್ಚ ಮಾಡಲಾಯಿತು.

ಪ್ರತಿ ವರ್ಷ ಮೌಂಟ್ ರಶ್‌ಮೋರ್ ರಾಷ್ಟ್ರೀಯ ಸ್ಮಾರಕಕ್ಕೆ 20 ಲಕ್ಷಕ್ಕೂ ಅಧಿಕ ಸಂಖ್ಯೆಯ ಪ್ರವಾಸಿಗರು ಭೇಟಿ ನೀಡುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in